**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಸಿಸಿ ನಂಬರ್ **393 /2022**

| | | | |
|---|---|---|---|
| ಸಾಕ್ಷಿಯ ಹೆಸರು | : ಪವನ್ ಕುಮಾರ | | ಸಿ.ಡಬ್ಲ್ಯು 3 |
| ತಂದೆಯ ಹೆಸರು | : ರಾಜಶೇಖರಪ್ಪ | | ಪಿ.ಡಬ್ಲ್ಯು 3 |
| ವಯಸ್ಸು | : 25 ವರ್ಷ | | |
| ಉದ್ಯೋಗ | : ವ್ಯವಸಾಯ | | |
| ವಾಸ ಸ್ಥಳ | : ಕೆ.ಹೊಸೂರು | | |

ದಿನಾಂಕಃ**14-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗೆ ಚಾಸಾ-1, 2 ಮತ್ತು 4 ಇವರ ಪರಿಚಯ ಇದೆ. ನಾವೆಲ್ಲರೂ ಸ್ನೇಹಿತರು ಇರುತ್ತೇವೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಿ.ಪಿ-6 ಮೇಲೆ ಇರುವ ಸಹಿ ನನ್ನದೇ ಇರುತ್ತದೆ ಅದನ್ನು ಸಂತೆದಿಬ್ಬ ಬಳಿ ಪೊಲೀಸರು ಪಂಚನಾಮೆಗೆ ಬಂದಾಗ ಮಾಡಿರುತ್ತೇನೆ. ಅಲ್ಲಿ ರಸ್ತೆ ಅಪಘಾತ ಆಗಿತ್ತು. ನಿ.ಪಿ-7 ರ ಫೋಟೋದಲ್ಲಿ ನಾನು, ಚಾಸಾ-2 ಮತ್ತು 4 ಇದ್ದೇವೆ. ಚಾಸಾ-2 ರವರು ಪೊಲೀಸರಿಗೆ ಸ್ಥಳವನ್ನು ತೋರಿಸಿದ್ದಾರೆ. ಅಜ್ಜಂಪುರದ ಕಡೆಯಿಂದ ಬರುತ್ತಿದ್ದ ಆ್ಯಂಬುಲೆನ್ಸ್ ನಿಂದ ಅಪಘಾತ ಆಗಿದೆ ಎಂದು ಚಾಸಾ-1 ನನಗೆ ತಿಳಿಸಿದ್ದಾರೆ. ಅಪಘಾತ ಆದ 2 ದಿನಗಳ ನಂತರ ಮಹಜರ್ ಮಾಡಿರುತ್ತೇವೆ. ಆಗ ಸಮಯ ಮುಂಜಾನೆ 11-30 ಆಗಿದ್ದಿರಬಹುದು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪೊಲೀಸರು ನನಗೆ ಪಂಚನಾಮೆ ಮಾಡುವ ಪೂರ್ವದಲ್ಲಿ ನೋಟಿಸು ನೀಡಿರಲಿಲ್ಲ. ಸ್ಥಳಕ್ಕೆ ಬರುವಂತೆ ನನಗೆ ಚಾಸಾ-1 ಮತ್ತು 2 ತಿಳಿಸಿದ್ದರು. ಸ್ಥಳದಲ್ಲಿ ಏನೋ ಒಂದು ದಾಖಲೆ ಬರೆದರು, ನಾನು ಓದಿಲ್ಲ. ಪೊಲೀಸರು ಕೂಡ ನನಗೆ ಓದಿ ಹೇಳಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಎಂಬ ದಾಖಲೆಗೆ ಸಹಿ ಮಾಡಿದ್ದೇನ ಎಂದರೆಸ ರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರು ಹೇಳಿಕೊಟ್ಟ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ **:** ಇಲ್ಲಃ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.